ಜೆಎಸ್‌ಎಸ್ ಮಹಾವಿದ್ಯಾಪೀಠ
**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**
ಪ್ರತಿಷ್ಠಿತ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)
ಊಟಿರಸ್ತೆ, ಮೈಸೂರು-೫೭೦ ೦೨೫
ESTD - 1964
☎ 0821-2548236 & 2548380 Fax: 0821-2548238 E-mail: jssautonomous@gmail.com

ದಿನಾಂಕ: 22.07.2015

<u>ಪ್ರಕಟಣೆ ಕೃಪೆಗಾಗಿ</u>

## "ಕಠಿಣ ಶ್ರಮ ಹೊರತು ಯಶಸ್ಸಿಗೆ ಪರ್ಯಾಯ ಮಾರ್ಗವಿಲ್ಲ"

21 ಜುಲೈ 2015 ರ ಮಂಗಳವಾರದಂದು ನಗರದ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಪ್ರಥಮ ಪದವಿ ವಿದ್ಯಾರ್ಥಿಗಳಿಗೆ ಏರ್ಪಡಿಸಲಾಗಿದ್ದ ಸ್ವಾಗತ ಮತ್ತು ಅರಿವು ಕಾರ್ಯಕ್ರಮದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರಾದ ಡಾ. ಲಿಂಗರಾಜ ಗಾಂಧಿ ಅವರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ಮೂರು ಪ್ರತಿಷ್ಠಿತ ಸ್ಥಾನಮಾನಗಳಾದ ನ್ಯಾಕ್‌ನಿಂದ 'ಎ' ದರ್ಜೆ, ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಹಾಗೂ ಅಂತಸ್ಸಾಮಾರ್ಥ್ಯಉಳ್ಳ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಪರಿಗಣಿತವಾಗಿರುವ ಈ ಕಾಲೇಜಿನಲ್ಲಿ ಪ್ರವೇಶ ಪಡೆದಿರುವುದು ನಿಮ್ಮ ಸೌಭಾಗ್ಯ, ನೀವು ಕನಸುಗಳನ್ನು ಕಾಣಬೇಕು ಮತ್ತು ನಿಮ್ಮ ಜೀವನದಲ್ಲಿ ಗುರಿಯನ್ನು ಇಟ್ಟುಕೊಳ್ಳಬೇಕು. ಆ ಗುರಿಯನ್ನು ತಲುಪಬೇಕಾದರೆ ನಿರಂತರವಾಗಿ ಕಠಿಣ ಶ್ರಮವನ್ನು ವಹಿಸಬೇಕಾಗುತ್ತದೆ ಹಾಗೂ ಕನಸು ಮತ್ತು ಗುರಿಗಳ ನಡುವೆ ಬಹಳ ವ್ಯತ್ಯಾಸವಿದ್ದು, ಗುರಿಯನ್ನು ತಲುಪಬೇಕಾದರ ನಿದ್ರೆ ಇಲ್ಲದ ರಾತ್ರಿಗಳನ್ನು ಕಾಣಬೇಕಾಗುತ್ತದೆ ಎಂದರು. ಒಬ್ಬ ವಿದ್ಯಾರ್ಥಿಯು ಸ್ವಂತ ಗುರಿ, ಸಮುದಾಯದ ಗುರಿ, ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಗುರಿಗಳನ್ನು ಹೊಂದಿರಬೇಕು, ಈ ಗುರಿಗಳು ಇಲ್ಲವಾದಲ್ಲಿ ಅವುಗಳನ್ನು ಶಿಕ್ಷಣ ಎಂಬ ಮಾಧ್ಯಮದ ಮೂಲಕ ಕಾಣಲು ಇದು ಸರಿಯಾದ ಕಾಲವಾಗಿದೆ. ಸಮಾಜದ ಒಲವಿನ ಬಗ್ಗೆ ಯುವ ಜನಾಂಗ ಕಾಳಜಿ ನೀಡುತ್ತಿಲ್ಲ ಮತ್ತು ನಮ್ಮ ದೇಶದಲ್ಲಿರುವ ಶೇ. 60 ಭಾಗದ ಯುವ ಶಕ್ತಿಯನ್ನು ಮಾನವ ಸಂಪನ್ಮೂಲವಾಗಿ ಪರಿವರ್ತಿಸುವ ಜವಬ್ದಾರಿ ಘನ ಸರ್ಕಾರ, ಶಿಕ್ಷಣ ಸಂಸ್ಥೆಗಳ ಮೇಲೆ ಇದ್ದು, ಎಲ್ಲಾ ಶಿಕ್ಷಣ ಸಂಸ್ಥೆಗಳು ಈ ನಿಟ್ಟಿನಲ್ಲಿ ಕೆಲಸ ಮಾಡಬೇಕು ಎಂದರು. ಗ್ರಾಮೀಣ ವಿದ್ಯಾರ್ಥಿಗಳು ಕಡ್ಡಾಯವಾಗಿ ಇಂಗ್ಲೀಷ್ ಜ್ಞಾನವನ್ನು ಮತ್ತು ತಂತ್ರಜ್ಞಾನವನ್ನು ಬಳಸುವುದನ್ನು ರೂಢಿಸಿಕೊಳ್ಳಲು ಸಲಹೆಯನ್ನು ನೀಡಿದರು, ಮಾತನ್ನು ಮುಂದುವರೆಸುತ್ತಾ ಕೇವಲ ಜ್ಞಾನ ಸಂಪಾದನೆ, ಉದ್ಯೋಗ ಸಂಪಾದನೆ ಮಾಡಿದರೆ ಅದು ಶಿಕ್ಷಣ ಅಲ್ಲ, ವ್ಯಕ್ತಿತ್ವವನ್ನು ನಿರ್ಮಾಣ ಮಾಡುವಂತಹ ಶಿಕ್ಷಣಬೇಕು, ಜ್ಞಾನವನ್ನು ಕಳ್ಳರಿಂದ, ರಾಜರಿಂದ ಕಸಿದುಕೊಳ್ಳಲು ಸಾಧ್ಯವಿಲ್ಲ, ಅಣ್ಣ ತಮ್ಮಂದಿರ ಜೊತೆ ಹಂಚಿಕೊಳ್ಳಲು ಸಾಧ್ಯವಿಲ್ಲ, ನಾವು ಎಷ್ಟು ಖರ್ಚು ಮಾಡುತ್ತೇವೋ ಅಷ್ಟೇ ಜ್ಞಾನ ಹೆಚ್ಚಾಗುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜೆಎಸ್ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ ಟಿ.ಡಿ.ಸುಬ್ಬಣ್ಣನವರು ಮಾತನಾಡಿ ಕಾಲೇಜಿನಲ್ಲಿ ಶೇ.೮೦% ಹಳ್ಳಿಯಿಂದ ಬರುವ ವಿದ್ಯಾರ್ಥಿಗಳಿದ್ದು ಸಾಮಾನ್ಯವಾಗಿ ಆ ಮಕ್ಕಳ ತಂದೆ ತಾಯಂದಿರು ರೈತರಾಗಿದ್ದು ಬಹಳ ಕಷ್ಟಪಟ್ಟು ತಮ್ಮ ಮಕ್ಕಳನ್ನು ಓದಲು ಕಾಲೇಜಿಗೆ ಕಳುಹಿಸುತ್ತಾರೆ. ಇದನ್ನು ಪ್ರತಿದಿನ ನೀವು ನೆನಪಿಸಿಕೊಳ್ಳಬೇಕು ಕಾಲೇಜು ವಿದ್ಯಾರ್ಥಿಗಳಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸುತ್ತಿದ್ದು ಅದನ್ನು ಸದುಪಯೋಗ ಪಡಿಸಿಕೊಳ್ಳಬೇಕು ಮತ್ತು ಪದವಿ ಕೋರ್ಸ್‌ಗಳ ಜೊತೆಯಲ್ಲಿ, ಬಿ.ವೋಕ್ ಮತ್ತು ಎಂ.ವೋಕ್ ಕೋರ್ಸ್‌ಗಳಿಗೆ ಸೇರಿಕೊಳ್ಳಲು ತಿಳಿಸಿದರು.

ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ ಬಿ ವಿ ಸಾಂಬಶಿವಯ್ಯನವರು ಪ್ರಾಸ್ತಾವಿಕ ನುಡಿಯನ್ನು ಆಡಿದರು. ನಂತರ ಸಾಂಸ್ಕೃತಿಕ ವೇದಿಕೆಯ ಸಂಚಾಲಕರಾದ ಪಿ ಎಂ ಮಹದೇವಸ್ವಾಮಿಯವರು ಕಾಲೇಜಿನಲ್ಲಿ ನಡೆಯುವ ಸಾಂಸ್ಕೃತಿಕ ಚಟುಚಟಿಕೆಗಳ ಬಗ್ಗೆ ಅರಿವು ಮೂಡಿಸಿದರೆ ದೈಹಿಕ ಶಿಕ್ಷಕರಾದ ಪ್ರೊ ಎಂ ಎಸ್ ವೆಂಕಟರಾಮ್‌ರವರು ಕ್ರೀಡಾ ಚಟುಚಟಿಕೆಗಳ ಬಗ್ಗೆ ಮಾಹಿತಿ ನೀಡಿದರು. ಪ್ರಾಂಶುಪಾಲರಾದ ಪ್ರೊ. ಎಂ ಮಹದೇವಪ್ಪನವರು ಎನ್‌ಸಿಸಿ ಬಗ್ಗೆ ಹಾಗೂ ಕನ್ನಡ ಪ್ರಾಧ್ಯಾಪಕರಾದ ವರಪ್ರಸಾದ್‌ರವರು ಎನ್‌ಎಸ್‌ಎಸ್ ಬಗ್ಗೆ ಮಾಹಿತಿ ನೀಡಿದರು.

ಕಾರ್ಯಕ್ರಮವನ್ನು ಕು. ಎ ಎಸ್ ಪೂರ್ಣಿಮ, ದ್ವಿತೀಯ ಬಿಬಿಎಂ ರವರು ಪ್ರಾರ್ಥನೆಯೊಂದಿಗೆ ಪ್ರಾರಂಭಿಸಿದರೆ, ವಂದನಾರ್ಪಣೆಯನ್ನು ಅರ್ಥಶಾಸ್ತ್ರದ ಸಹಪ್ರಾಧ್ಯಾಪಕರಾದ ಪ್ರೊ. ಸಿ ರಮೇಶ್‌ರವರು ಮಾಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಸಾಂಸ್ಕೃತಿಕ ವೇದಿಕೆಯ ಸಂಚಾಲಕರಾದ ಪ್ರೊ. ಪಿ ಎಂ ಮಹದೇವಸ್ವಾಮಿಯವರು ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಬೋಧಕರು ಹಾಗೂ ಬೋಧಕೇತರ ವರ್ಗದವರು ಹಾಗೂ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ಪ್ರಾಂಶುಪಾಲರು
(ಪ್ರೊ ಎಂ ಮಹದೇವಪ್ಪ)
ಜೆ.ಎಸ್.ಎಸ್.ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
(ಸ್ವಾಯತ್ತ)
ಊಟಿ ರಸ್ತೆ, ಮೈಸೂರು

ಗೆ
ಸಂಪಾದಕರು
---------------
---------------
ಮೈಸೂರು